ಓ.ಎಸ್. ನಂ.*145/2018*

ಪಿ.ಡಬ್ಲು-*4.*

ಸಾಕ್ಷಿಯನ್ನು ಇಂದು ದಿನಾಂಕಃ *03.12.2022* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ.ಡಬ್ಲು.ಎ. ವಕೀಲರಿಂದ**

ತಕರಾರು ಜಾಗದ ಉದ್ದಳತೆ ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ದಾವಾ ಜಾಗೆಯಿಂದ ದನ ಕರುಗಳು, ಮತ್ತು ಮನುಷ್ಯರು ಗಾಡಿಗಳು ಓಡಾಡುತ್ತವೆ ಎಂದು ಬರೆಸಿರುತ್ತೇನೆ

ಎಂಧರೆ ಸರಿ ಅಲ್ಲ. ಸದರಿ ದಾವಾ ಜಾಗೆಯಿಂದ ವಾಹನಗಳು, ಮನುಷ್ಯರು, ಬಂಡಿ ಮತ್ತು ದನಕರುಗಳು ಓಡಾಡುತ್ತಾವಾ ಅಥವಾ ಇಲ್ಲ ಎಂಧರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ಜಾಗೆಯನ್ನು ಯಶ್ವಂತರಾವ ರವರ ಬಳಿಯಿಂದ ಖರೀದಿ ಮಾಡಿರುತ್ತಾನೆ. ಅವನು ಎಷ್ಟು ಜಾಗೆಯನ್ನು ಖರೀದಿ ಮಾಡಿರುತ್ತಾನೋ ಅದನ್ನು ಸಂಪೂರ್ಣವಾಗಿ ಕಟ್ಟಿರುತ್ತಾನೆ ಎಂಧರೆ ಸರಿ. ಪ್ರತಿವಾದಿಯ ಮನೆ ತಲೆಬಾಗಿಲು ಪೂರ್ವ ದಿಕ್ಕಿಗೆ ಇರುತ್ತದೆ ಎಂಧರೆ ಸರಿ ಅಲ್ಲ. ಪ್ರತಿವಾದಿ ತನ್ನ ಮನೆಗೆ ಪೂರ್ವ ದಿಕ್ಕಿನಿಂದಲೇ ಓಡಾಡುತ್ತಾನೆ ಎಂಧರೆ ಸರಿ. ದಾವಾ ಜಾಗೆ ಪ್ರತಿವಾದಿಯ ಮನೆಯ ಪೂರ್ವಕ್ಕೆ ಇರುತ್ತದೆ ಎಂಧರೆ ಸರಿ. ದಾವಾ ಜಾಗೆಯಲ್ಲಿ ದನಕರುಗಳು, ವಾಹನಗಳು, ಮತ್ತು ಬಂಡಿ, ಮನುಷ್ಯರು ಓಡಾಡುತ್ತಾರೆ ಎಂದರೆ ಸರಿ ಅಲ್ಲ. ದಾವಾ ಜಾಗೆಯು ಸರಕಾರಿ ರಸ್ತೆ ಇರುತ್ತದೆ ಎಂಧರೆ ಸರಿ. ಸಾಕ್ಷಿ ಮುಂದುವರೆದು ಸರಕಾರಿ ರಸ್ತೆ ಪ್ರತಿವಾದಿಗೆ ಸಂಬಂಧಿಸಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯ ತಲೆಬಾಗಿಲು ದಕ್ಷಿಣಕ್ಕೆ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಊರಲ್ಲಿ ಏನಾದರೂ ಜಗಳ ಆದರೆ ಪಂಚಾಯತಿ ನಡೆಸುವುದಿಲ್ಲ. ದಾವಾ ಜಾಗೆಯ ಸಲುವಾಗಿ ಒಂದು ವರ್ಷದ ಹಿಂದೆ ಪಂಚಾಯತಿ ಮಾಡಿರುತ್ತೇನೆ. ಪಂಚಾಯತಿಯಲ್ಲಿ ಇದ್ದ ಜಾಗದಲ್ಲಿಯೇ ದಕ್ಷಿಣೋತ್ತರವಾಗಿಯೇ ನಡೆಯಬೇಕು ಎಂದು ನಿರ್ಣಯವಾಯಿತು. ಸಾಕ್ಷಿಗೆ ನಿಪಿ-26 ನ್ನು ತೋರಿಸಿ ಇದರಲ್ಲಿ ಏನಾದರೂ ಪ್ರತಿವಾದಿ ದಕ್ಷಿಣೋತ್ತರವಾಗಿಯೇ ನಡೆಯಬೇಕು ಎಂದು ನಿರ್ಣಯವಾಯಿತು ಎಂದು ಬರೆದಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಹೇಳಿದ ಹಾಗೆ ಯಾವುದೇ ಪಂಚಾಯತಿ ನಡೆದಿರುವುದಿಲ್ಲ ಎಂಧರೆ ಸರಿ ಅಲ್ಲ. ನನಗೆ ವಾದಿಯು ಸುಮಾರು 50 ವರ್ಷಗಳಿಂದ ಪರಿಚಯ ಇರುತ್ತಾನೆ. ನಾನು ಮತ್ತು ವಾದಿ ಸೇರಿ ನಿಪಿ-26 ನ್ನು ಹುಟ್ಟಿಸಿದ್ದೇವೆ ಎಂಧರೆ ಸರಿ ಅಲ್ಲ. ನಾವು ಯಾವ ತಾರೀಖಿಗೆ ಪಂಚಾಯತಿ ಮಾಡಿರುತ್ತೇವೆ ಎಂದು ನನಗೆ ನೆನಪಿಲ್ಲ. ಈ ದಾವೆಗೆ ಅನುಕೂಲವಾಲಿ ಎಂಬ ಉದ್ದೇಶದಿಂದ ವಾದಿಯೊಂದಿಗೆ ಸೇರಿ ನಿಪಿ-26 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿ ಅಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.

ಓ.ಎಸ್. ನಂ.*145/2018*

ಪಿ.ಡಬ್ಲು-*3.*

ಸಾಕ್ಷಿಯನ್ನು ಇಂದು ದಿನಾಂಕಃ *03.12.2022* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ.ಡಬ್ಲು.ಎ. ವಕೀಲರಿಂದ**

ವಾದಿ ಮತ್ತು ಪ್ರತಿವಾದಿಯರ ಪರಿಚಯ ಇದೆ. ವಾದಿಯ ಮನೆಯ ಸಂಖ್ಯೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮನೆ ಸಂಖ್ಯೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉದ್ದಳತೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ತನ್ನ ಜಾಗೆಯನ್ನು ವಾದಿಯ ಅಣ್ಣ ತಮ್ಮಂದಿರ ಪೈಕಿಯಾದ ಲೇಸಣ್ಣರವರಿಂದ ಖರೀದಿ ಹಿಡಿದಿರುತ್ತಾರೆ. ಪ್ರತಿವಾದಿ ಜಾಗೆಯನ್ನು ಖರೀದಿ ಹಿಡಿದು ಅದರಲ್ಲಿ ಸುಮಾರು 5-6 ವರ್ಷಗಳಿಂದ ಮನೆ ಕಟ್ಟಿರುತ್ತಾನೆ. ಪ್ರತಿವಾದಿ ತನ್ನ ಮನೆಯ ತಲೆಬಾಗಿಲನ್ನು ದಕ್ಷಿಣದ ಕಡೆ ಬಿಟ್ಟಿರುತ್ತಾನೆ.

ತಲೆಬಾಗಿಲ ಮುಂದೆ ಸಿಡಿ ಮತ್ತು ಕಟ್ಟೆಗಳು ಇವೆ, ಸಾಕ್ಷಿ ಮುಂದುವರೆದು ಜಬರದಸ್ತಿಯಿಂದ ಕಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಪ್ರತಿವಾದಿ ತಾನು ಖರೀದಿ ಹಿಡಿದ ಜಾಗದಲ್ಲಿಯೇ ಮನೆ ಕಟ್ಟಿರುತ್ತಾನೆ ಎಂದರೆ ಸಾಕ್ಷಿ ಮುಂದುವರೆದು ಜಬರದಸ್ತಿಯಿಂದ ಸಿಡಿಯನ್ನು ಕಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಸಿ.ಡಿ ಎಷ್ಟು ಆಳತೆಯಲ್ಲಿ ಕಟ್ಟಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಸಿಡಿ. ಮತ್ತು ಕಟ್ಟೆ ಪ್ರತಿವಾದಿಯ ಜಾಗದಲ್ಲಿಯೇ ಇರುತ್ತವೆ ಎಂಧರೆ ಸರಿ ಅಲ್ಲ. ದಾವಾ ಜಾಗೆಯು ಪ್ರತಿವಾದಿಯ ಮನೆಯ ದಕ್ಷಿಣ ದಿಕ್ಕಿಗೆ ಬರುತ್ತದೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ದಾವಾ ಜಾಗೆಯಿಂದ ದನ ಕರುಗಳು, ಮತ್ತು ಮನುಷ್ಯರು  ಎತ್ತಿನ ಬಂಡಿಗಳು ಓಡಾಡುತ್ತವೆ ಎಂದು ಬರೆಸಿರುತ್ತೇನೆ ಎಂಧರೆ ಸರಿ. ಸುಮಾರು 50 ವರ್ಷಗಳಿಂದ ದನಕರುಗಳು, ಬಂಡಿಗಳು, ಮನುಷ್ಯರು ಅಲ್ಲಿಂದ ಓಡಾಡುತ್ತಾರೆ. ಸದರಿ ದಾರಿಯಿಂದಲೇ ಪ್ರತಿವಾದಿಯೂ ಸಹ ಕೂಡ ತನ್ನ ಮನೆಗೆ ಹೋಗಿ ಬರುವುದು ಮಾಡುತ್ತಾನೆ ಎಂಧರೆ ಸರಿ. ಸದರಿ ದಾರಿಯು ಸೂರ್ಯಕಾಂತನ ಮನೆಯ ಪೂರ್ವ ದಿಕ್ಕಿಗೆ ಬರುತ್ತದೆ ಎಂಧರೆ ಸರಿ. ದಾವಾ ಜಾಗೆಯ ಸಲುವಾಗಿ ವಾದಿ ಮತ್ತು ಪ್ರತಿವಾದಿಯ ನಡುವೆ ಜಗಳ ಆಗುತ್ತದೆಯಲ್ಲಾ ಅದರ ಸಲುವಾಗಿ ನೀವೇನಾದರೂ ಪಂಚಾಯತಿ ಮಾಡಿದ್ದೀರಾ ಎಂಧರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಜಾಗದ ಕುರಿತು ಪಂಚಾಯತಿ ಆಗಿದೆ ಎಂದು ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ಸದರಿ ಓಡಾಡುವ ದಾರಿಯು ಸರಕಾರಿ ರಸ್ತೆ ಇರುತ್ತದೆ ಎಂದರೆ ಸರಿ ಅಲ್ಲ. ಸದರಿ ರಸ್ತೆ ವಾದಿಯದ್ದೇ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ವಾದಿಯು ನನ್ನ ಗೆಳೆಯನಾಗಬೇಕು ಎಂದರೆ ಸರಿ ಅಲ್ಲ, ಅವರು ನಮ್ಮ ಊರಿನವರು ಇರುತ್ತಾರೆ. ವಾದಿಯು ನನಗೆ ಈ ರೀತಿಯಾಗಿ ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾನೆ ಎಂಧರೆ ಸರಿ ಅಲ್ಲ, ಮುಂದುವರೆದು ಸಾಕ್ಷಿ ಇದೆ ಬಾ ಎಂದು ಕರೆದುಕೊಂಡು ಬಂದಿರುತ್ತಾನೆ. ವಾದಿಯು ಏನು ಏನು ಹೇಳಬೇಕೆನ್ನುವುದನ್ನು ಹೇಳಿದ್ದಾರಾ ಎಂದರೆ ಸಾಕ್ಷಿಯು ನನಗೆ ಗೊತ್ತಿದ್ದನ್ನು ಹೇಳುತ್ತೀದ್ದೇನೆ ಎಂದು ನುಡಿಯುತ್ತಾರೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.